ಇ.ಪಿ ನಂ.ಃ4/2013
ಪಿಡಬ್ಲ್ಯೂ - 2

ದಿನಾಂಕ 22-11-2019 ರಂದು ಸಾಕ್ಷಿಗೆ ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಪಿ.ಕೆ ವಕೀಲರಿಂದ.**

ನಾನು ಉರ್ದು ಭಾಷೆಯಲ್ಲಿ ನನ್ನ ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಶಾಲೆ ಓದಿಲ್ಲ ಕೇವಲ ಸಹಿ ಮಾಡಲು ಮಾತ್ರ ಕಲಿತಿದ್ದೇನೆ. ಅಬ್ದುಲ್ ಖಾದರ ಮತ್ತು ಸೋಫಿಸಾಬ ಇಬ್ಬರು ಕಾಸಾ ಅಣ್ಣ-ತಮ್ಮಂದಿರು ಎಂದರೆ ಸರಿ. ಅಬ್ದುಲಖಾದರ ಸಾಬ ಇವರಿಗೆ ಮಹಿಬೂಬಸಾಬ ಎನ್ನುವ ಒಬ್ಬ ಮಗ ಇದ್ದರು ಎಂದರೆ ಸರಿ. ಸೊಫಿಸಾಬನಿಗೆ ರಸೂಲ್ ಸಾಬ ಅಂತಾ ಮಗ ಇದ್ದ ಎಂದರೆ ಸರಿ. ಜೈತುನಬೀ ಎನ್ನುವವರು ಮಹಿಬೂಬಸಾಬನ ಹೆಂಡತಿ ಎಂದರೆ ಸರಿ. ರಸೂಲಸಾಬನ ಹೆಂಡತಿ ಬೇಗಂಬೀ ಎಂದರೆ ಸರಿ. 3 ನೇ ಪಕ್ಷಗಾರರ ಅರ್ಜಿಯಲ್ಲಿ ನಮೂದು ಮಾಡಿದ 1 ನೇ ಅರ್ಜಿದಾರಳಾದ ಬೇಗಂಬೀಯ ಮೊದಲನೆ ಮದುವೆಯು ಕಲಬುರಗಿ ತಾಲೂಕಿನ ಪಿರೋಜಾಬಾದ ಗ್ರಾಮದ ಒಬ್ಬ ರಸೂಲಸಾಬ ಖಾಜಿಯವರ ಜೊತೆ ಕಕ್ಕೆರಾ ಗ್ರಾಮದಲ್ಲಿ 1964-65 ನೇ ಸಾಲಿನಲ್ಲಿ ಆಗಿತ್ತು ಎಂದರೆ ಸರಿ. ಮಹಿಬೂಬಸಾಬ ಮತ್ತು ಜೈತುನಬೀಯವರಿಗೆ ಶಮ್ಸಾದ ಬೇಗಂ ಮತ್ತು ಮಮ್ತಾಜ್ ಬೇಗಂ ಅಂತಾ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಸದರಿ ಬೇಗಂಬೀ ರವರಿಗೆ ನಜ್ಮಾಬೇಗಂ ಅಂತಾ ಒಬ್ಬ ತಂಗಿ ಇದ್ದಾಳೆ ಆಕೆ ಹೈದರಾಬಾದನಲ್ಲಿ ವಾಸ ಮಾಡುತ್ತಾಳೆ ಮತ್ತು ಆಕೆಯ ಗಂಡನ ಹೆಸರು ಅಸ್ಮತ್‌ಅಲೀ ಎಂದು ಇದೆ ಎಂದರೆ ಸರಿ. ಸದರಿ ಬೇಗಂಬಿಯ ಅಣ್ಣ-ತಮ್ಮಂದಿರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಬೇಗಂಬೀಯ ಮದುವೆ ರಸೂಲಸಾಬನ ಜೊತೆ ಆದಾಗ ಆಕೆಗೆ 22 ವರ್ಷ ವಯಸ್ಸಾಗಿತ್ತು ಎಂದರೆ ಸರಿ ಅಲ್ಲ 22 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು. ಸದರಿ ಬೇಗಂಬೀ ಮತ್ತು ರಸೂಲಸಾಬ ರವರಿಗೆ ರಶೀದ ಅಂತಾ ಒಬ್ಬ ಮಗನಿದ್ದಾನೆ ಎಂದರೆ ಸರಿ. ಸದರಿ ರಶೀದ 1969 ರಲ್ಲಿ ಹುಟ್ಟಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ರಸೂಲಸಾಬ ಬರಗಾಲ ಅಂದರೆ 1972-73 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ. ಶಮ್ಸಾದಬೇಗಂ ಮತ್ತು ಮಮ್ತಾಜಬೇಗಂ ಇದೇ ನ್ಯಾಯಾಲಯದಲ್ಲಿ ಪಾಲು ಕೋರಿ ಒಂದು ದಾವೆ ಸಲ್ಲಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಶಮ್ಸಾದಬೇಗಂ ಮತ್ತು ಮಮ್ತಾಜಬೇಗಂರವರು ರಶೀದಸಾಬನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಮ್ಸಾದಬೇಗಂ ಮತ್ತು ಮಮ್ತಾಜಬೇಗಂ ರವರ ಆಸ್ತಿಯನ್ನು ನನ್ನ ಮಗ ಖರೀದಿ ಮಾಡಿದ್ದಾನೆ ಎಂದರೆ ಸರಿ. ಬೇಗಂಬಿಯ ಮಗ ರಜಾಕ ಕೂಡ

ಶಮ್ಸಾದಬೇಗಂ ಮತ್ತು ಮಮ್ತಾಜಬೇಗಂ ಇವರಿಂದ ಜಮೀನು ಖರೀದಿ ಮಾಡಿದ್ದಾನೆ ಎಂದರೆ ಸರಿ.

ಮುಸ್ಲಿಂ ಮದುವೆಯ ಸಮಯದಲ್ಲಿ ವರನ ಕಡೆಯಿಂದ ವಧುವಿಗೆ ಒಪ್ಪಿಗೆ ಮತ್ತು ವಧುವಿನಿಂದ ಕಡೆಯಿಂದ ವರನಿಗೆ ಒಪ್ಪಿಗೆ ಸ್ಪಷ್ಟವಾಗಿ ಸೂಚಿಸಿದಾಗ ಮತ್ತು ವರ ಹಾಗೂ ವಧು ಇಬ್ಬರು ಮದುವೆಗೆ ಸಕ್ಷಮವಾಗಿದ್ದಾಗ ಇಬ್ಬರ ಮುಸ್ಲಿಂಮರ ಮದುವೆಯಾಗುತ್ತದೆ ಎಂದರೆ ಸರಿ. ಮದುವೆಯ ನಿಖಾನಾಮದ ಮೇಲೆ ಮದುವೆಯ ಸಂದರ್ಭದಲ್ಲಿ ಖಾಜಿ ಮತ್ತು ಸಾಕ್ಷಿದಾರರು ಸಹಿ ಮಾಡುತ್ತಾರೆ ಎಂದರೆ ಸರಿ. ಸದರಿ ಬೇಗಂಬೀ ಮತ್ತು ಲಾಡ್ಲೆಸಾಬನ ಮದುವೆಯು ಜೇವರ್ಗಿ ಪಟ್ಟಣದ ಜೋಪಡಪಟ್ಟಿ ಏರಿಯಾದ ಕೋಲೇಪಾಷ ಇವರ ಮನೆಯಲ್ಲಿ 1977 ನೇ ಇಸವಿಯಲ್ಲಿ ಆಗಿದೆ. ಕೋಲೇಪಾಷನ ಮನೆಯಲ್ಲಿ ಲಾಡ್ಲೆಸಾಬ ಬಾಡಿಗೆಗೆ ವಾಸ ಮಾಡುತ್ತಿದ್ದರು. ಬೇಗಂಬೀ ಮತ್ತು ಲಾಡ್ಲೆಸಾಬನ ಮದುವೆಯ ನಿಖಾನಾಮದಲ್ಲಿ ಕೋಲೇಪಾಷನ ಮನೆಯಲ್ಲಿ ಮದುವೆಯಾಗಿದೆ ಎಂದು ನಮೂದು ಮಾಡಲಾಗಿದೆ. ಅವರ ಮದುವೆಯಲ್ಲಿ ಖಾಜಾಮುದ್ದಿನ ಎನ್ನುವ ಖಾಜಿ ಇದ್ದರು. ಖಾಜಾಮುದ್ದಿನ ಎನ್ನುವ ಖಾಜಿಯವರು ಮದುವೆಯ ನಿಖಾನಾಮದಲ್ಲಿ ಸಹಿ ಮಾಡಿದ ಬಗ್ಗೆ ನಾನು ನೋಡಿಲ್ಲ. ಸದರಿ ಖಾಜಾಮುದ್ದಿನರವರು ಜೇವರ್ಗಿಯ ಖಾಜಿ ಇದ್ದರು. ಮದುವೆಯಾದ ದಿನವೇ ಬೇಗಂಬೀ ಮತ್ತು ಲಾಡ್ಲೆಸಾಬರವರಿಗೆ ಮದುವೆಯ ನಿಖಾನಾಮದ ಒಂದೊಂದು ಪ್ರತಿಗಳನ್ನು ಖಾಜಿಯವರು ದಿನಾಂಕ ಮತ್ತು ಸಹಿ ಹಾಕಿ ಕೊಟ್ಟಿದ್ದಾರೆ. ಸದರಿ ಬೇಗಂಬೀ ಮತ್ತು ಲಾಡ್ಲೆಸಾಬನ ಮದುವೆಯನ್ನು ನಾನೇ ಮಾಡಿಕೊಟ್ಟಿದ್ದೇನೆ ಆದರೆ ನಿಖಾನಾಮದಲ್ಲಿ ಅದನ್ನು ಬರೆದಿಲ್ಲ.

ಲಾಡ್ಲೆಸಾಬನು ಈ ಪ್ರಕರಣದ ಜೆಡಿಆರ್ ಆಗಿರುವ ಬಸವರಾಜನಿಗೆ ಬರೆದುಕೊಟ್ಟ ದಿನಾಂಕ 18-01-1995 ರ ಕರಾರು ಪತ್ರದಲ್ಲಿ ನಾನು ಕೂಡ ಸಾಕ್ಷಿದಾರ ಅಂತಾ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಈ ಹಂತದಲ್ಲಿ ಶ್ರೀ ಪಿ.ಕೆ ವಕೀಲರು ಸಾಕ್ಷಿದಾರರಿಗೆ ದಿನಾಂಕ 18-01-1995 ರ ಕರಾರು ಪತ್ರ ಮತ್ತು ಒಂದು ರಶೀದಿಯನ್ನು ಮೊಖಾಬಿಲೆ ಮಾಡಿ ಆ ದಾಖಲೆಗಳ ಮೇಲೆ ಉರ್ದು ಭಾಷೆಯಲ್ಲಿ ಮಾಡಿರುವ ಸಹಿ ನಿಮ್ಮದೇ ಇದೆ ಎಂದು ಸಾಕ್ಷಿದಾರರಿಗೆ ಪ್ರಶ್ನಿಸಿದಾಗ ಸಾಕ್ಷಿದಾರರು ಹೌದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿದಾರರು ಸದರಿ ದಾಖಲೆಗಳ ಮೇಲಿರುವ ತಮ್ಮ ಸಹಿಯನ್ನು ಒಪ್ಪಿಕೊಂಡಿರುವುದರಿಂದ ಸದರಿ

ದಾಖಲೆಗಳನ್ನು ಡಿಕ್ರಿಧಾರಕರ ಪರ ನಿಡಿ-1 ಮತ್ತು ನಿಡಿ-2 ಎಂದು ಮತ್ತು ಅವುಗಳ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿಡಿ-1(ಎ) ಮತ್ತು ನಿಡಿ-2(ಎ) ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಲಾಡ್ಲೆಸಾಬನು ಬಸವರಾಜನಿಗೆ ಮನೆ ನಂಬರ 12-78 ರಲ್ಲಿರುವ ಆಸ್ತಿಯ ಕಬ್ಜೆಯನ್ನು ಕೊಟ್ಟಿದ್ದಾನೆಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಬಸವರಾಜನು ಮೊದಿನಬಾಷನ ವಿರುದ್ಧ ಸಲ್ಲಿಸಿದ ಓ.ಎಸ್ ನಂಬರ 48/1999 ರಲ್ಲಿ ನಾನು ಬಸವರಾಜನ ಕಡೆಯಿಂದ ಸಾಕ್ಷ್ಯ ನುಡಿಯಲು ಪಿಡಬ್ಲ್ಯೂ-2 ಎಂದು ಶಪಥಪತ್ರ ಸಲ್ಲಿಸಿ ನಂತರ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ಈ ಹಂತದಲ್ಲಿ ಶ್ರೀ ಪಿ.ಕೆ ವಕೀಲರು ದಿನಾಂಕ 23-03-1993 ರ ದಿನಾಂಕದ ಒಂದು ಕರಾರು ಪತ್ರ ದಿನಾಂಕ 18-01-1995 ರ ರಶೀದಿಯ ದೃಢೀಕೃತ ನಕಲುಗಳನ್ನು ಮೊಖಾಬಿಲೆ ಮಾಡಿ ಅವುಗಳ ಮೇಲೆ ನಿಮ್ಮ ಸಹಿಹಿ ಇದೆ ಸಾಕ್ಷಿದಾರರಿಗೆ ಪ್ರಶ್ನಿಸಿದಾಗ ಸಾಕ್ಷಿದಾರರು ಸದರಿ ದಾಖಲೆಗಳನ್ನು ನೋಡಿ ಪರಿಶೀಲಿಸಿ ತಮ್ಮ ಸಹಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸದರಿ ದಾಖಲೆಗಳನ್ನು ಕ್ರಮವಾಗಿ ನಿಡಿ-3 ಮತ್ತು ನಿಡಿ-4 ಎಂದು, ಅವುಗಳ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿಡಿ-3(ಎ) ಮತ್ತು ನಿಡಿ-4(ಎ) ಎಂದು ಗುರುತಿಸಲಾಯಿತು.

1993 ರಿಂದ 2013 ನೇ ಇಸವಿಯವರೆಗೆ ಮನೆ ನಂಬರ 12-78 ರಲ್ಲಿ ಜೆಡಿಆರ್ ಬಸವರಾಜನೇ ವಾಸ ಮಾಡುತ್ತಿದ್ದ ಎಂದರೆ ಸರಿ ಅಲ್ಲ, ಸಾಕ್ಷಿದಾರರು ಮುಂದುವರೆದು 1993 ರಿಂದ 1999 ನೇ ಇಸವಿಯವೆರೆಗೆ ಮಾತ್ರ ಬಸವರಾಜ ವಾಸ ಮಾಡುತ್ತಿದ್ದ ನಂತರ ಬೇಗಂಬೀ ವಾಸ ಮಾಡುತ್ತಿದ್ದಾಳೆ ಎನ್ನುತ್ತಾರೆ. ಬೇಗಂಬೀ ಮತ್ತು ಆಕೆಯ ಮಕ್ಕಳಾದ ಜರೀನಾ, ಹಸೀನಾ ಮತ್ತು ರಜಾಕ ಇವರೆಲ್ಲ ಹೈದರಾಬಾದನ ಕೊಲಿಚೌಕನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಬೇಗಂಬಿ ಜೇವರ್ಗಿಗೆ ಆಗಾಗ ಬಂದು ಹೋಗುತ್ತಾಳೆ ಎನ್ನುತ್ತಾರೆ. ಬೇಗಂಬೀ ಮಕ್ಕಳ ಮದುವೆಯು ಹೈದರಾಬಾದನಲ್ಲಿ ಆಗಿದೆ ಎಂದರೆ ಸರಿ ಅವರ ಮದುವೆಗೆ ನಾನು ಹೋಗಿದ್ದೇ ಎಂದರೆ ಸರಿ.

ಬಸವರಾಜ ದಾವಾ ಮನೆಯಲ್ಲಿ ಇರುತ್ತಾನೆ ಎಂದು ಮೊದಿನಬಾಷ ಓ.ಎಸ್ ನಂಬರ 6/2007 ನ್ನು ಕಬ್ಜಾ ಕೋರಿ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾನೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿಯಾಗಿತ್ತು ಎಂದರೆ ಸರಿ. ನಂತರ ಬಸವರಾಜ ಮೇಲ್ಮನವಿ ಹೋಗಿದ್ದರು ಎಂದರೆ ಸರಿ ಅಫೀಲ್‌ನಲ್ಲಿ ಯಾವ ತೀರ್ಪು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಬೇಗಂಬೀ

ದಾವಾ ಮನೆಯ ನಂಬರ 12-78 ರಲ್ಲಿ ವಾಸ ಮಾಡುತ್ತಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಬೇಗಂಬೀ ಮತ್ತು ಬಸವರಾಜ ಮತ್ತು ನಾನು ಮಿಲಾಪಿಯಾಗಿ ಡಿಕ್ರಿಧಾರಕರ ವಿರುದ್ಧ ಸುಳ್ಳು 3 ನೇ ಅರ್ಜಿ ಸಲ್ಲಿಸುವಂತೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಬೇಗಂಬೀಯ ಮದುವೆ ಲಾಡ್ಲೆಸಾಬನ ಜೊತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಲಾಡ್ಲೆಸಾಬ ಕೊಳಕೂರು ಗ್ರಾಮದಲ್ಲಿ ವಾಸ ಮಾಡುತ್ತಿದ್ದರೂ ಸಹಿತ ಜೇವರ್ಗಿಯ ಕೋಲೇಪಾಷನ ಮನೆಯಲ್ಲಿ ವಾಸ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಿಪಿ-1 ಮತ್ತು ನಿಪಿ-2 ನ್ನು ಸುಳ್ಳು ಸೃಷ್ಟಿ ಮಾಡಿ 3 ನೇ ಅರ್ಜಿದಾರರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದರೆ ಸರಿ ಅಲ್ಲ. ನನಗೂ ಮತ್ತು ಡಿಕ್ರಿಧಾರಕನಿಗೂ ವೈಶಮ್ಯ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಒಬ್ಬ ಹೈದರಜಾನಿ ಎನ್ನುವ ವ್ಯಕ್ತಿಗೆ ಜಾನಿಮಿಯಾ ಎಂದು ಕರೆಯಲಾಗುತ್ತದೆ ಎಂದರೆ ಸರಿ. ಸದರಿ ಹೈದರಜಾನಿಯ ಅಡ್ಡಹೆಸರು ಪೋಲಿಸವಾಲೆ ಮತ್ತು ಹೊಟೇಲ್ ವಾಲೆ ಎಂದು ಇದೆ ಎಂದರೆ ಸರಿ. ಅವನು ದೇವೆಂದ್ರಪ್ಪ ಎನ್ನುವವರ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ಜೆಡಿಆರ್ ಬಸವರಾಜನು ಕೂಡ ದೇವೆಂದ್ರಪ್ಪ ಎನ್ನುವವರ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ನಾನು ಮತ್ತು ಜಾನಿಮಿಯಾ ಮತ್ತು ಬಸವರಾಜ ಎಲ್ಲರೂ ಮಿಲಾಪಿಯಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ